- -                ಓ ಎಸ್ ನಂ.85/2023

ಡಿ . ಡಬ್ಲ್ಯೂ 4

ದಿನಾಂಕ : 17-06-2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ

ನಮ್ಮ ಮಾರಶೆಟ್ಟಿಹಳ್ಳಿ ಎಂದರೆ ಸರಿ . ನಾನು ವ್ಯವಸಾಯಗಾರನ್ನಾಗಿದ್ದು ನನಗೆ ಮುಕ್ಕಾಲು ಎಕರೆ ಸ್ವತ್ತು ಇರುತ್ತದೆ . ನಾನು ಹೈನುಗಾರಿಕೆಯನ್ನು ಸಹಾ ಮಾಡುತ್ತೇನೆ ಎಂದರೆ ಸರಿ . ನಾನು ವ್ಯವಸಾಯದ ಜೊತೆಗೆ ಕೂಲಿಗೂ ಸಹಾ ಹೋಗುತ್ತೇನೆ .

1 ನೇ ಪ್ರತಿವಾದಿಯು ನನ್ನ ಸಂಬಂಧಿಕರು ಎಂದರೆ ಸರಿ . 1 ನೇ ಪ್ರತಿವಾದಿಗೆ ಸೇರಿದ ಸ್ವತ್ತಿನ ಸರ್ವೆ ನಂ. 57.ಸದರಿ ಸ್ವತ್ತಿನ ಒಟ್ಟು ವಿಸ್ತೀರ್ಣ ಎಷ್ಟಿದೆ ಎಂದು ಗೊತ್ತಿಲ್ಲ . ಸದರಿ ಸ್ವತತ್ತಿನ ಚಕ್ಕುಬಂದಿ ಪೂರ್ವ ಕ್ಕೆ ಃ ಕೆರೆ, ಪಶ್ಚಿಮಕ್ಕೆ ಃ ಯೋಗೀಶ್ ರವರ ಸ್ವತ್ತು ಉತ್ತರ-ದಕ್ಷಿಣಕ್ಕೆ ಯಾರ ಸ್ವತ್ತು ಇದೆ ಎಂದು ನಿಖರವಾಗಿ ಹೇಳಲು ಗೊತ್ತಾಗುತ್ತಿಲ್ಲ . 1 ನೇ ಪ್ರತಿವಾದಿಗೆ ಸೇರಿದ ಸ್ವತ್ತನ್ನು ನೀವು ಖುದ್ದಾಗಿ ನೋಡಿಲ್ಲ ಎಂದರೆ ಸಾಕ್ಷಿಯು ಖುದ್ದಾಗಿ ನೋಡಿಲ್ಲ ಆದರೆ ಕೆಲಸಕ್ಕೆ ಹೋಗುತ್ತೇನೆ ಎಂದು ತಿಳಿಸಿದ್ದಾರೆ . ಸರ್ವೆ ನಂ. 57 ರ ಪೂರ್ವಕ್ಕೆ ಕೆರೆಕೋಡಿ ಇದ್ದು ಅದಕ್ಕೆ ಹೊಂದಿಕೊಂಡಂತೆ ಬೋರ್ವೆಲ್ ಇರುತ್ತದೆ ಎಂದರೆ ಸರಿ . ಪ್ರಮಾಣ ಪತ್ರಕ್ಕೆ ವಿವರಗಳನ್ನು ನಾನು ತಿಳಿಸಿಲ್ಲ . ಪ್ರಮಾಣ ಪತ್ರಕ್ಕೆ ಸಹಿ ಮಾಡಲು ಹೇಳಿದ ಕಾರಣ ಸಹಿ ಮಾಡಿದ್ದೀರಿ ಎಂದರೆ ಓದಿ ತಿಳಿದುಕೊಂಡ ನಂತರ ಸಹಿ ಮಾಡಿದ್ದೇನೆ ಎಂದು ತಿಳಿಸಿದ್ದಾರೆ . ಈ ದಾವೆಯ ಬಗ್ಗೆ ಮಾಹಿತಿ ಇಲ್ಲದಿದ್ದರೂ 1 ನೇ ಪ್ರತಿವಾದಿ ನನ್ನ ಸಂಬಂಧಿಕರಾಗಿರುವ ಕಾರಣ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಇದೇ ದಾವಾ ಸ್ವತ್ತಿಗೆ ಸಂಬಂಧಿಸಿ ಗುಬ್ಬಿಯ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಓ ಎಸ್ 84/2023 ಎಂಬುದಾಗಿ ದಾವೆಯೊಂದು ಚಾಲ್ತಿಯಲ್ಲಿದ್ದು ಸದರಿ ದಾವೆಯಲ್ಲಿ ಸಹಾ ನಾನು ಸಾಕ್ಷಿದಾರನಾಗಿ ಹಾಜರಾಗಿದ್ದೆ ಎಂದರೆ ಸರಿ . ಮುಖ್ಯ ವಿಚಾರಣೆಗೆ ವಿವರಗಳನ್ನು 1 ನೇ ಪ್ರತಿವಾದಿಯು ಹೇಳಿದ್ದಾರೆ ಎಂದರೆ ನನಗೆ ಗೊತ್ತಿಲ್ಲ .

ಮರು ವಿಚಾರಣೆ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ, ಕೇಳಿದೆ, ಸರಿ ಇದೆ, ಎಂದರು.

SD/-
(ಅನುಪಮ.ಡಿ. )
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಗುಬ್ಬಿ .